ಆ) ಆನ್‌ಲೈನ್‌ನಲ್ಲಿ ಸ್ವೀಕೃತವಾದ ಅರ್ಜಿಗಳ ಪರಿಶೀಲನೆ ಕಾರ್ಯ ನಡೆದಿರುತ್ತದೆ. ಆದಷ್ಟು ಬೇಗನೆ ಪಡಿತರ ಚೀಟಿಗಳನ್ನು ಮುದ್ರಿಸಿ ನೀಡುವ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) 20 ಲಕ್ಷಕ್ಕೂ ಮೀರಿ ಪಡಿತರ ಚೀಟಿಗಾಗಿ ಅರ್ಜಿಗಳು ಸ್ವೀಕೃತವಾಗಿರುವುದರಿಂದ ಗಡುವು ನಿಗದಿಪಡಿಸುವುದು ಕಷ್ಟಸಾಧ್ಯ. ಆದಷ್ಟು ಬೇಗನೆ ನೀಡಲು ಕ್ರಮ ಕೈಗೊಳ್ಳಲಾಗುವುದು.

ಈ) ಈ ರೀತಿ ಅನರ್ಹ ಪಡಿತರ ಚೀಟಿಗಳನ್ನು ಪಡೆದವರ ಸಂಖ್ಯೆ ಲಕ್ಷಾನುಗಟ್ಟಲೆ ಇರುವುದರಿಂದ, ಪ್ರಸ್ತುತ ಜವಾಬ್ದಾರಿಯನ್ನು ನಿಗದಿಪಡಿಸುವುದು ಮತ್ತು ಶಿಸ್ತು ಕ್ರಮಗಳನ್ನು ಪ್ರಾರಂಭಿಸುವುದು ಕಷ್ಟ ಸಾಧ್ಯ. ಆದುದರಿಂದ, ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಕೆ.ಹೆಚ್.ಬಿ ಬಡಾವಣೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 205 (153)

ಸದಸ್ಯರ ಹೆಸರು : ಶ್ರೀ ರವಿ ಸುಬ್ರಮಣ್ಯ ಎಲ್.ಎ. (ಬಸವನ ಗುಡಿ)

ಉತ್ತರಿಸುವ ಸಚಿವರು : ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು)

ಪ್ರಶ್ನೆಗಳು:–

ಅ) ರಾಜ್ಯದಲ್ಲಿ ಕೆ.ಹೆಚ್.ಬಿ.ಯಿಂದ ನಿರ್ಮಾಣವಾಗುವ ಬಡಾವಣೆಗಳಲ್ಲಿ ಕಡಿಮೆ ಬೇಡಿಕೆ ಇರುವ ಪ್ರದೇಶ (less demand area) ಗಳಲ್ಲಿ ಒಬ್ಬ ವ್ಯಕ್ತಿ ಎಷ್ಟು ನಿವೇಶನಗಳನ್ನು ಪಡೆದುಕೊಳ್ಳಬಹುದು?

ಆ) ಕೆ.ಹೆಚ್.ಬಿ.ಯು ಯಾವ ಮಾನದಂಡವನ್ನು ಅನುಸರಿಸಿ ಕಡಿಮೆ ಬೇಡಿಕೆ ಇರುವ ಪ್ರದೇಶಗಳನ್ನು ಘೋಷಿಸುತ್ತದೆ? ರಾಜ್ಯದಲ್ಲಿರುವ ಕಡಿಮೆ ಬೇಡಿಕೆ ಇರುವ ಪ್ರದೇಶಗಳ ವಿವರವನ್ನು ಜಿಲ್ಲಾವಾರು ನೀಡುವುದು;

ಇ) ಕೆ.ಹೆಚ್.ಬಿ.ಯ ಯಾವ ನಿಬಂಧನೆ/ ನಿಯಮದಡಿಯಲ್ಲಿ, ಕಡಿಮೆ ಬೇಡಿಕೆ ಪ್ರದೇಶಗಳನ್ನು ಸಾರ್ವಜನಿಕರ ಗಮನಕ್ಕೆ ತರಲಾಗುವುದು?

ಈ) ಕಡಿಮೆ ಬೇಡಿಕೆ ಇರುವ ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿರುವ ವ್ಯಕ್ತಿಯು, ಹೆಚ್ಚು ಬೇಡಿಕೆ ಇರುವ ಪ್ರದೇಶದ ಬಡಾವಣೆಗಳಲ್ಲಿ ಮತ್ತೊಂದು ನಿವೇಶನವನ್ನು ಪಡೆಯಬಹುದೇ? ಇದು ಕೆ.ಹೆಚ್.ಬಿ.ಯ ಯಾವ ನಿಯಮದನ್ವಯ ಸಿಂಧುವಾಗುತ್ತದೆ?

ಉ) ಬೆಂಗಳೂರಿನ ಸುತ್ತಮುತ್ತಲಿರುವ ಕೆ.ಹೆಚ್.ಬಿ. ಬಡಾವಣೆಗಳಲ್ಲಿ ಬೇಡಿಕೆ ಇಲ್ಲದಿರುವ ಬಡಾವಣೆಗಳು ಯಾವವು?

ಉತ್ತರಗಳು:–

ಅ) ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 8 ರಡಿಯಲ್ಲಿ ಒಬ್ಬ ವ್ಯಕ್ತಿ ಕರ್ನಾಟಕ ರಾಜ್ಯದಲ್ಲಿ ಒಂದು ನಿವೇಶನವನ್ನು ಪಡೆಯಲು ಅವಕಾಶವಿರುತ್ತದೆ.

ಕರ್ನಾಟಕ ಗೃಹ ಮಂಡಳಿಯ ಕಾಯ್ದೆ ಅಡಿ ಕಡಿಮೆ ಬೇಡಿಕೆಯ ಬಗ್ಗೆ ಯಾವುದೇ ನಿಬಂಧನೆ/ ನಿಯಮ ಇರುವುದಿಲ್ಲ.

ಆ) ಕರ್ನಾಟಕ ಗೃಹ ಮಂಡಳಿಯು ಸ್ವತ್ತುಗಳನ್ನು ಹಂಚಿಕೆ ಮಾಡಲು ಅರ್ಹ ಅರ್ಜಿದಾರರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಸ್ವತ್ತುಗಳಿಗಿಂತ ತುಂಬಾ ಕಡಿಮೆ ಅರ್ಜಿಗಳು ಬಂದಲ್ಲಿ ಅವು ಕಡಿಮೆ ಬೇಡಿಕೆ ಪ್ರದೇಶವಾಗಿರುತ್ತದೆ. ಆದರೆ, ಆ ರೀತಿ ಯಾವುದೇ ಘೋಷನೆ ಮಾಡಿರುವುದಿಲ್ಲ.

ಪ್ರಸ್ತುತ ರಾಜ್ಯದಲ್ಲಿ ತುಂಬಾ ಕಡಿಮೆ ಬೇಡಿಕೆ ಇರುವ ಪ್ರದೇಶ ಕರ್ನಾಟಕ ಗೃಹ ಮಂಡಳಿಯ ಗಮನಕ್ಕೆ ಬಂದಿರುವುದಿಲ್ಲ.

ಇ) ಕರ್ನಾಟಕ ಗೃಹ ಮಂಡಳಿಯ ಕಾಯ್ದೆ ಅಡಿ ಕಡಿಮೆ ಬೇಡಿಕೆಯ ಬಗ್ಗೆ ಯಾವುದೇ ನಿಬಂಧನೆ/ ನಿಯಮ ಇರುವುದಿಲ್ಲ. ಆದರೆ ಬೇಡಿಕೆ ಹೆಚ್ಚು ಅಥವಾ ಕಡಿಮೆ ಎಂಬ ಬಗ್ಗೆ ತಿಳಿಯಲು ಪತ್ರಿಕಾ ಪ್ರಕಟಣೆ ಮೂಲಕ ಬೇಡಿಕೆ ಸಮೀಕ್ಷೆ ಕೈಗೊಳ್ಳಲಾಗುವುದು. ಆದರೆ

ಹಂಚಿಕೆಯಾಗದೇ ಉಳಿದ ಸ್ವತ್ತುಗಳನ್ನು ಹಂಚಿಕೆ ಮಾಡಲು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗುವುದು.

ಈ) ಅವಕಾಶವಿರುವುದಿಲ್ಲ.

ಉ) ಪ್ರಸ್ತುತ, ಆ ರೀತಿ ಯಾವುದೇ ಬಡಾವಣೆ ಇರುವುದಿಲ್ಲ.

ಹಾಸನದ ಕೆ.ಎಸ್.ಆರ್.ಪಿ. ಸಿಬ್ಬಂದಿಗೆ ವಸತಿ ಗೃಹಗಳನ್ನು ನೀಡುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 207 (161)

ಸದಸ್ಯರ ಹೆಸರು : ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ)

ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)

ಪ್ರಶ್ನೆಗಳು:–

ಅ) ಹಾಸನ ನಗರದಲ್ಲಿ ಕೆ.ಎಸ್.ಆರ್.ಪಿ ತುಕಡಿಯ ಸಿಬ್ಬಂದಿ ವರ್ಗದವರಿಗೆ ವಸತಿಗೃಹಗಳನ್ನು ನಿರ್ಮಿಸಲು ಜಮೀನನ್ನು ವಶಪಡಿಸಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ, ವಶಪಡಿಸಿಕೊಳ್ಳಲಾಗಿರುವ ಜಮೀನಿನ ವಿಸ್ತೀರ್ಣವೆಷ್ಟು?

ಆ) ಕಳೆದ 4 ವರ್ಷಗಳಿಂದಲೂ ವಸತಿ ಗೃಹಗಳನ್ನು ನಿರ್ಮಿಸದೇ ಯೋಜನೆಯ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಪೂರ್ಣ ಮಾಹಿತಿ ನೀಡುವುದು.

ಉತ್ತರಗಳು:–

ಅ) ಹಾಸನ ನಗರದಲ್ಲಿ ಕೆ.ಎಸ್.ಆರ್.ಪಿ. ತುಕುಡಿಯ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ನಿರ್ಮಿಸಲು ಪ್ರತ್ಯೇಕವಾಗಿ ಜಮೀನು ವಶಪಡಿಸಿಕೊಂಡಿರುವುದಿಲ್ಲ.

ಆದರೆ, ಹಾಸನ ನಗರದ ಎಸ್.ಎಂ.ಕೃಷ್ಣ ನಗರ ಬಡಾವಣೆಗಾಗಿ